ಕಾರ್ಯಕ್ರಮದಲ್ಲಿ ಬಂದು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ನಿತಿನ್ ಆಹ್ವಾನಿಸಿದರು. ಭಾವೇಶ್ ಅವರಿಗೆ ಜೈನ ಸಮುದಾಯವನ್ನು ತಲುಪುವ ಅವಕಾಶ ಇದಾಗಿತ್ತು. ಅಲ್ಲಿ ಅವರು 'ಜೈನ್ ವಿಮೆನ್ ಇಂಟರ್‌ನ್ಯಾಷನಲ್'ನ ನೀರೂಬೆನ್ ಶಹಾ ಅವರನ್ನು ಭೇಟಿಯಾದರು. ಅವರ ಸಂಘಟನೆಯ ಮೂಲಕ ಪ್ರತಿ ವರ್ಷ ಮುಂಬಯಿಯ ವರ್ಲ್ಡ್ ಟ್ರೇಡ್ ಸೆಂಟರ್‌ನಲ್ಲಿ ಪ್ರದರ್ಶನ ಆಯೋಜಿತವಾಗುತ್ತಿತ್ತು. ಅವುಗಳಲ್ಲಿ ಭಾಗವಹಿಸುವ ಅವಕಾಶ ಭಾವೇಶ್ ಅವರಿಗೆ ದೊರೆಯಿತು. ಇಂತಹ ದೊಡ್ಡ ಪ್ರದರ್ಶನದಲ್ಲಿ ಭಾಗವಹಿಸಿದಾಗ ಭಾವೇಶ್ ಮತ್ತು ಅವರ ಅಂಧ ತಂಡಕ್ಕೆ ಆತ್ಮವಿಶ್ವಾಸ ಹೆಚ್ಚುತ್ತಿತ್ತು.

ಕೃಷ್ಣಕಾಂತ್ ಭಾಯಿ ಮತ್ತು ಅನುರಾಧಾ ಬೆನ್ ಅವರ ಸೊಸೆ ನೀನಾ ಅವರು ದುಬಾಯಿಯಲ್ಲಿ ವಾಸಿಸುತ್ತಿದ್ದರು. ಅವರಿಗೆ ಪುಣೆಯ ಒಂದು ಪ್ರತಿಷ್ಠಿತ ಮಹಿಳಾ ಸಂಘಟನೆಯೊಡನೆ ಸಂಪರ್ಕವಿತ್ತು. ಆ ಸಂಘಟನೆಯ ಮೂಲಕ ಪ್ರತಿವರ್ಷ ನವರಾತ್ರಿಯಲ್ಲಿ ಪುಣೆಯ ಹೋಟೆಲ್ ಅರೋರಾ ಟವರ್‌ನ ಏಳನೇ ಮಹಡಿಯಲ್ಲಿ ಇರುವ ದೊಡ್ಡ ಹಾಲಿನಲ್ಲಿ, ಭವ್ಯ ಪ್ರದರ್ಶನ ಆಯೋಜಿತವಾಗುತ್ತಿತ್ತು.

ಮೊದಲ ಬಾರಿಗೆ ಅಲ್ಲಿ ಸ್ಟಾಲ್ ಹಾಕಲು ಕರೆದಾಗ, ಭಾವೇಶ್ ಸಡಗರದಿಂದ ಅಲ್ಲಿಗೆ ಬಂದಿಳಿದಿದ್ದರು. ಭಾವೇಶ್ ಅವರಿಗೆ ಸಂಘಟನೆ ಉಚಿತವಾಗಿ ಸ್ಟಾಲ್ ಹಾಕಲು ಜಾಗ ನೀಡಲಿತ್ತು. ಆದರೆ ಇಲ್ಲಿ ಬಂದಾಗ ಇವರ ಸ್ಟಾಲ್‌ಗೆ ಹಾಲಿನಲ್ಲಿ ಯಾವ ಜಾಗವೂ ಖಾಲಿ ಇರಲಿಲ್ಲ. ಇಂತಹ ಅನಿರೀಕ್ಷಿತ ಅಡಚಣೆಗಳು ಭಾವೇಶ್ ಅವರ ಮನಸ್ಸನ್ನು ಕುಗ್ಗಿಸುತ್ತಿರಲಿಲ್ಲ. ಅತ್ಯಂತ ಸಹನೆಯಿಂದ ವರ್ತಿಸುತ್ತಿದ್ದರು, ಪ್ರಸನ್ನವದನರಾಗಿಯೇ ಮುಂದಿನ ಮಾರ್ಗವನ್ನು ಹುಡುಕುತ್ತಿದ್ದರು. ಅಲ್ಲಿದ್ದ ಸ್ವಯಂಸೇವಕರು ಹೋಟೆಲಿನ ಸಿಬ್ಬಂದಿಗಳಿಗೆ ಹೇಳಿ, ಎರಡು ಮೇಜುಗಳನ್ನು ತರಿಸಿದರು. ಲಿಫ್ಟಿನ ಬಳಿಯೇ ಒಂದಿಷ್ಟು ತಾವು ಮಾಡಿಕೊಂಡು ಭಾವೇಶ್ ಸ್ಟಾಲ್ ಹಾಕಿದರು. ಭಾವೇಶ್ ಬಹಳಷ್ಟು ಮೋಂಬತ್ತಿಗಳನ್ನು ಹೊತ್ತು ತಂದಿದ್ದರು. ಆದರೆ ಸಿಕ್ಕಿದ್ದು ಎರಡು ಮೇಜು ಮಾತ್ರ. ಲಿಫ್ಟ್‌ನ ಬಳಿ ಇನ್ನೂ ಜಾಗವಿದ್ದ ಕಾರಣ ಭಾವೇಶ್ ಹೋಟೆಲಿನ ಸಿಬ್ಬಂದಿಗೆ ಮತ್ತೆ ನಾಲ್ಕು ಮೇಜುಗಳನ್ನು ನೀಡಲು ಪ್ರಾರ್ಥಿಸಿದರು. ಅಲ್ಲಿ ಹಾಲಿನ ಒಳಗೆ ಸುಮಾರು 150 ಸ್ಟಾಲ್‌ಗಳು ಇದ್ದವು. ಆ ಪ್ರತಿ ಸ್ಟಾಲ್‌ನಲ್ಲಿ ಕೇವಲ ಒಂದು ಮೇಜು ಮಾತ್ರ ಇತ್ತು. ಅಲ್ಲಿ ಅಷ್ಟೇ ಜಾಗ ಇದ್ದದ್ದು. ಅದಲ್ಲದೆ, ದಿನವೊಂದಕ್ಕೆ ಬಾಡಿಗೆ 35,000 ರೂಪಾಯಿಗಳು. ಇಲ್ಲಿ ಇವರು ಆರು ಮೇಜಿನ ದೊಡ್ಡ ಸ್ಟಾಲ್ ಹಾಕಿಬಿಟ್ಟಿದ್ದರು!

ಮೇಲೆ ಕೆಳಗೆ ಹೋಗಿ ಬರಲು ಒಂದೇ ಒಂದು ಲಿಫ್ಟ್ ಇದ್ದದ್ದು. ಮೇಲೆ ಎಂಟನೇ ಮಹಡಿಯಲ್ಲಿ ಈಜುವ ಕೊಳ ಮತ್ತು ರೆಸ್ಟೋರೆಂಟ್ ಕೂಡಾ ಇದ್ದಿತು. ಹಾಗಾಗಿ ಲಿಫ್ಟ್‌ನ ಹತ್ತಿರ ಸಾಕಷ್ಟು ಜನಸಂದಣಿ ಸದಾ ಇರುತ್ತಿತ್ತು. ಭಾವೇಶ್ ಅವರ ಸಹನೆ, ಸಿಹಿಯಾದ ವರ್ತನೆ, ಪರಿಶ್ರಮ ಫಲ ಕೊಟ್ಟಿತ್ತು. ಅವರು ತಂದಿದ್ದ ಅಷ್ಟೂ ಮೋಂಬತ್ತಿಗಳು ಹೆಚ್ಚು ಕಡಿಮೆ ಮಾರಾಟವಾಗಿದ್ದವು. ಅದರ ನಂತರ ಅನೇಕ ವರ್ಷಗಳು ಆ ಸಂಘಟನೆ ಇವರನ್ನು ಆಹ್ವಾನಿಸಿತು. ಹಾಲಿನ ಒಳಗೆ ಇವರಿಗಾಗಿ ಒಂದು ಸ್ಟಾಲ್ ಕಾದಿರಿಸಿ ಇಡಲು ಮರೆಯುತ್ತಿರಲಿಲ್ಲ.

ಹೇಮಾ ಬೆನ್ ಶಾಹ್ ಮತ್ತು ಅವರ ಮಗಳು ಮಾನಸೀ ಬೆನ್, ಭಾವೇಶ್ ಅವರ ಬಹಳ ಹಳೆಯ ಗ್ರಾಹಕರಾಗಿದ್ದರು. ಸುಮಾರು ವರ್ಷಗಳ ಹಿಂದೆಯೇ ಹೇಮಾ ಬೆನ್ ಪುಟ್ಟ ಮಾನಸಿಯನ್ನು ಕರೆದುಕೊಂಡು ಮಹಾಬಲೇಶ್ವರಕ್ಕೆ ಬಂದಾಗ, ಇವರ ಸ್ಟಾಲ್‌ಗೆ ಬಂದಿದ್ದರು. ಆ ದಿನಗಳಲ್ಲಿ ಆದ ಪರಿಚಯದಿಂದಾಗಿ, ಮುಂಬಯಿಯಲ್ಲಿ ಎಲ್ಲೇ ಪ್ರದರ್ಶನವಿರಲಿ, ಇವರಿಬ್ಬರೂ ಸಹಾಯ ಮಾಡಲು ಅಲ್ಲಿಗೆ ಬಂದು ನಿಲ್ಲುತ್ತಿದ್ದರು. ಈಗಂತೂ ಡಾ. ಮಾನಸೀ ಸುಪ್ರಸಿದ್ಧ ಫಿಸಿಯೋಥೆರಪಿಸ್ಟ್ ಆಗಿದ್ದರು. ಆದರೆ ಸನ್‌ರೈಸ್ ಕ್ಯಾಂಡಲ್ಸ್ ಜೊತೆಯ ಅವರ ನಂಟು ಯಾವ ರೀತಿಯಲ್ಲಿಯೂ ಕಡಿಮೆ ಆಗಿರಲಿಲ್ಲ. ಮುಂಬಯಿಯ ಲಾಲ್‌ಬಾಗ್ ಜಾಗದಲ್ಲಿ, 'ಜೈನ್ ವರ್ಲ್ಡ್ ಟ್ರೇಡ್ ಫೇರ್' ಆಯೋಜಿಸಲಾಗಿತ್ತು. ದೀಪಾವಳಿ ಹತ್ತಿರದಲ್ಲಿಯೇ ಇತ್ತು. ಹೇಮಾ ಬೆನ್ 'ಸನ್‌ರೈಸ್ ಕ್ಯಾಂಡಲ್ಸ್'ಗಾಗಿ ಒಂದು ಸ್ಟಾಲ್ ಬುಕ್ ಮಾಡಿದ್ದರು. ಲಾಲ್‌ಬಾಗ್‌ನ ಹತ್ತಿರವೇ ಭಾವೇಶ್ ತಮ್ಮ ಅಂಧ ತಂಡಕ್ಕೆ ಇಳಿದುಕೊಳ್ಳಲು ಹೋಟೆಲಿನ ಕೋಣೆಗಳನ್ನು ಬುಕ್ ಮಾಡಿದ್ದರು. ಹಿಂದಿನ ದಿನ ಸಂಜೆ ಮುಂಬಯಿ ತಲುಪಿ ಸ್ಟಾಲ್‌ನ ವ್ಯವಸ್ಥೆಯನ್ನು ಮಾಡಲು ಅಲ್ಲಿಗೆ ಬಂದಾಗ ಅವರಿಗೆ ತಿಳಿಯಿತು, ಇದು ಸಣ್ಣ ಪುಟ್ಟ ಪ್ರದರ್ಶನವಲ್ಲ. 250 ಊಟ ತಿಂಡಿಯ ಸ್ಟಾಲ್‌ಗಳ ಜೊತೆಯಲ್ಲಿ 650 ವಿವಿಧ ವಸ್ತುಗಳ ಸ್ಟಾಲ್‌ಗಳು ಇದ್ದವು. ಆ 650 ಸ್ಟಾಲ್‌ಗಳಲ್ಲಿ ಸನ್‌ರೈಸ್‌ದು ಒಂದು ಸ್ಟಾಲ್ ಆಗಿತ್ತು. ಆ ವಿಶಾಲವಾದ ಪೆಂಡಾಲ್‌ನ ಒಳಗೆ ಅಷ್ಟೆಲ್ಲ ಸ್ಟಾಲ್‌ಗಳ ಗೊಂಡಾರಣ್ಯದ ಭೂಲ್ಭುಲಯ್ಯದ ಮೂಲಕ ಹಾದು ತಮ್ಮ ಸ್ಟಾಲ್‌ಗೆ ತಲುಪುವುದೇನೂ ಸುಲಭದ ವಿಷಯವಾಗಿರಲಿಲ್ಲ.

ಇಷ್ಟೊಂದು ಸ್ಟಾಲ್‌ಗಳು ಇರುವಾಗ, ಯಾರಾದರೂ ಒಂದೊಂದು ಸ್ಟಾಲ್‌ನಲ್ಲಿ ಐದು ನಿಮಿಷ ನಿಂತರೂ, ಅವರ ಪೂರಾ ದಿನ ಅಲ್ಲಿ ಕಳೆಯುವುದು. ಅವರು ಏನೆಲ್ಲ ಎಂದು ಖರೀದಿಸುವರು? ತಮಗೆ ಮಾರಾಟ ಆಗುವುದೇ ಎಂಬ ಸಣ್ಣ ಚಿಂತೆ ಭಾವೇಶ್ ಅವರಿಗಿದ್ದರೂ, ದೀಪಾವಳಿ ಹತ್ತಿರವಿದ್ದದ್ದು, ಅವರ ಆಶಾವಾದಕ್ಕೆ ಕಾರಣವಾಗಿತ್ತು. ಬೆಳಗ್ಗೆ ಉದ್ಘಾಟನೆ ಆದೊಡನೆ, ಜೈನ ಸಮುದಾಯ ಪ್ರವಾಹದಂತೆ ಹರಿದು ಬಂದಿತು. ಆಯೋಜಕರೂ ಇಷ್ಟು ಜನಸಂದಣಿಯನ್ನು ನಿರೀಕ್ಷಿಸಿರಲಿಲ್ಲ, ನಡೆದು ಬರುತ್ತಿದ್ದವರಿಂದಲೇ ಟ್ರಾಫಿಕ್ ಜಾಮ್ ಆಗಿಹೋಗಿತ್ತು. ಒಳಗೆ ಬಂದ ಜನ ಸ್ಟಾಲ್‌ನ ಮುಂಗಟ್ಟುಗಳಿಗೆ ಅಂಟಿಕೊಂಡು ಮುಂದೆ ನಡೆಯುತ್ತಿದ್ದರು. ಅನೇಕ ಬಾರಿ ಆಹ್ವಾನಿಸಿದ್ದ ಪ್ರಮುಖ ವಿವಿಐಪಿಗಳು ಹಾದಂತೆ, ಈ ಜನರಿಗೆ ಅನೇಕ ನಿಮಿಷಗಳು ಇದ್ದ ಕಡೆ ಇದ್ದಂತೆಯೇ ಅಲುಗಾಡದೆ ನಿಲ್ಲಬೇಕಾಗುತ್ತಿತ್ತು. ದಿಟವಾದ ಅರ್ಥದಲ್ಲಿ ಭಾವೇಶ್ ಅವರ ತಂಡಕ್ಕೆ ಸತ್ವಪರೀಕ್ಷೆಯ ಸಮಯ. ಅವರು ಕಣ್ಣಿಂದ ಕಾಣದೆಯೇ ಸುತ್ತಲಿನ ಪರಿಸರದ ಪರಿಸ್ಥಿತಿಯನ್ನು ಅಂದಾಜು ಮಾಡುತ್ತಿದ್ದರು. ಅಂಧ ತಂಡ ಅಧೈರ್ಯಗೊಳ್ಳದೆ, ತಮ್ಮ ಸ್ಟಾಲ್‌ನ ಎದುರು ನಿಂತವರೆಲ್ಲರೊಡನೆ ಪ್ರೀತಿ ಸ್ನೇಹದಿಂದ ಮಾತನಾಡಿದರು. ಅನೇಕ ಬಾರಿ ಜೊತೆಗೆ ಬಂದ ಚಿಕ್ಕ ಮಕ್ಕಳು, ಕುಡಿಯುವ ನೀರೂ ಇಲ್ಲದೆ ಈ ಜನರ ನೂಕುನುಗ್ಗಲಿನಲ್ಲಿ ಸಿಕ್ಕಿಕೊಂಡಿದ್ದರು. ಆ ಮಕ್ಕಳಿಗೆ ತಮ್ಮಲ್ಲಿದ್ದ ನೀರು ಮತ್ತು ಬಿಸ್ಕೆಟ್ ಕೊಟ್ಟು ಸಮಾಧಾನ ಮಾಡಿದರು. ಇವರ ವಿನಮ್ರತೆ ಆಯೋಜಕರ ಗಮನಕ್ಕೆ ಬಾರದೆ ಹೋಗಲಿಲ್ಲ. ಅಲ್ಲಿಗೆ ಆಗಮಿಸಿದ ಪ್ರತಿಯೊಬ್ಬ ಪ್ರತಿಷ್ಠಿತ ಅತಿಥಿಯನ್ನು ಅವರು ಭಾವೇಶ್ ಅವರ ಸ್ಟಾಲ್‌ಗೆ ಕರೆತಂದರು. ಬಂದ ಅತಿಥಿಗಳಿಗೆ ಭಾವೇಶ್ ಕೆಲವು ಮೋಂಬತ್ತಿಗಳನ್ನು ಉಡುಗೊರೆಯಾಗಿ ಕೊಟ್ಟರು. ಕೆಲವರು ತೆಗೆದುಕೊಂಡರು, ಕೆಲವರು ತೆಗೆದುಕೊಳ್ಳಲು ನಿರಾಕರಿಸಿದರು. ಆದರೆ ಭಾವೇಶ್ ಅವರ ತಂಡ ಆಯೋಜಕರ ಹೃದಯವನ್ನು ಗೆದ್ದಿತ್ತು. ಆ ನೂಕುನುಗ್ಗಲು, ಅಗಲು ಬಗಲಿನ ಸ್ಟಾಲ್‌ನವರೆಲ್ಲ ಆಯೋಜಕರ ಬಳಿ ದೂರು ಹೇಳುತ್ತ ಸಾಗಿದ್ದರೆ, ಭಾವೇಶ್ ಅವರ ತಂಡ ತನ್ನೆಲ್ಲ ಧ್ಯಾನವನ್ನು ತಮ್ಮ ವ್ಯಾಪಾರದತ್ತ, ಗ್ರಾಹಕರನ್ನು ಮಾತನಾಡಿಸುವತ್ತ ಕೇಂದ್ರೀಕರಿಸಿತ್ತು.

ಕೊನೆಯ ದಿನ, ಸಂಜೆ ತಡವಾಗಿತ್ತು. ಭಾವೇಶ್ ಅವರ ತಂಡ ಅಂಗಡಿಯನ್ನು ಮುಚ್ಚುವ ಸಿದ್ಧತೆಯಲ್ಲಿ ತೊಡಗಿತ್ತು. ಆಗ ಏಕಾಏಕಿ ಭಾವೇಶ್ ಅವರ ಹೆಸರು ಮೈಕ್‌ನಲ್ಲಿ ಘೋಷಣೆಯಾಯಿತು. ನೀತಾ ತಂಡದೊಡನೆ ಪ್ಯಾಕಿಂಗ್ ಕೆಲಸದಲ್ಲಿ ತೊಡಗಿದ್ದರು. ಭಾವೇಶ್ ವೇದಿಕೆಯ ಬಳಿಗೆ ತಲುಪಿದಾಗ, ಅಲ್ಲಿ ಆಯೋಜಕರು ಹೇಳುತ್ತಿದ್ದರು 'ನಾವು ಮೂರು ದಿನಗಳಿಂದ ಈ ಕ್ಯಾಂಡಲ್ ಸ್ಟಾಲ್ ಬಳಿಗೆ ನಮ್ಮ ಎಲ್ಲ ಅತಿಥಿಗಳನ್ನು ಕರೆದುಕೊಂಡು ಹೋಗುತ್ತಿದ್ದೆವು. ಗ್ರಾಹಕರೊಡನೆ ಹೇಗೆ ಮಾತನಾಡಬೇಕು, ಎಂತಹ ವಿನಮ್ರತೆಯಿಂದ ತಮ್ಮ ವಸ್ತುಗಳನ್ನು ಮಾರಾಟ ಮಾಡಬಹುದು, ಇದನ್ನು ಕಲಿಯಬೇಕಿದ್ದರೆ ಈ ಅಂಧಮಿತ್ರರಿಂದ ಕಲಿಯಿರಿ. ಈ ಬೇಸಿಗೆಯ ಹಬೆಯಲ್ಲಿ, ಇಷ್ಟೆಲ್ಲ ಜನರ ನೂಕುನುಗ್ಗಲಿನಲ್ಲಿ, ಪ್ರತಿಯೊಬ್ಬರೂ ನಮ್ಮನ್ನು ದೂಷಿಸುತ್ತಿರುವಾಗ, ಈ ದೃಷ್ಟಿಬಾಧಿತ ಮಿತ್ರರು, ಬಹಳ ಸಂತಸದಲ್ಲಿ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಇವರು ನಿಜಕ್ಕೂ ದಿಟವಾದ ಅರ್ಥದಲ್ಲಿ ನಮ್ಮ ಗುರುಗಳು. ನಾವು ಇವರಿಂದ ಪ್ರೇರಣೆ ಪಡೆದು ಮಾರ್ಕೆಟಿಂಗ್ ತಂತ್ರಗಳನ್ನು ಕಲಿಯಬೇಕು. ನಮ್ಮ ಆಯೋಜಕ ಸಮಿತಿ ಸರ್ವಸಮ್ಮತಿಯಿಂದ ಸರ್ವಶ್ರೇಷ್ಠ ಸ್ಟಾಲ್ ಪುರಸ್ಕಾರ, 'ಸನ್‌ರೈಸ್ ಕ್ಯಾಂಡಲ್ಸ್'ನ ಸ್ಟಾಲ್‌ಗೆ ಕೊಡಬೇಕೆಂದು ನಿರ್ಧರಿಸಿದೆ'. ಭಾವೇಶ್ ಸಂತಸದಿಂದ ತಮ್ಮ ತಂಡದ ಪರವಾಗಿ ಪುರಸ್ಕಾರವನ್ನು ಸ್ವೀಕರಿಸಿದರು.

* * *

(ಸಶೇಷ)